## ಪ್ರಧಾನ  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ

ಸಿ.ಸಿ. ನಂ- 397/2020

Cw-1 Pw-1

| | |
|---|---|
| ಹೆಸರು | ಶಬಾನಾ ಗಂಡ ಉಮರ ಪಾರುಕ |
| ವಯಸ್ಸು | 32 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಜಮಖಂಡಿ |

ದಿನಾಂಕಃ 03-12-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ಮೃತ ಉಮರಪಾರುಕ ಇತನು ನನ್ನ ಗಂಡ . ಆಹೀಲ ಎಂಬವನು ನನ್ನ ಮಗ . ಮೃತ ನನ್ನ ಗಂಡ ಸೆಂಟರಿಂಗ ಕೆಲಸ ಮಾಡುತ್ತಿದ್ದನು . ಚಾಸಾ-9 ನನ್ನ ಅತ್ತೆ ಚಾಸಾ-11 ಮತ್ತು ಇಲಿಯಾಸ ಎಂಬುವವರು ನನ್ನ ಮೈದುನವರು . ಚೌಡಯ್ಯಾನಗರದ ನಾನು ಮನೆಯಲ್ಲಿ ಚಾಸಾ-9 , 11 ಮತ್ತು ಇಲಿಯಾಸ ಮತ್ತು ಮೃತ ಪಾರುಕ ವಾಸುಸಿತ್ತಿದ್ದೇವು .

ದಿನಾಂಕ 22-11-2019 ರಂದು ಸಂಜೆ 04-00 ಗಂಟೆ ಸುಮಾರಿಗೆ ಮೃತ ಉಮರಪಾರುಕ ಇತನು ಮೊಟರ ಸೈಕಲ ಸಂಖ್ಯೆ ಕೆ ಎ – 48-ಕೆ-5965 ನೇದ್ದರ ಮೇಲೆ ಅಬ್ದುಲರಜಾಕ ಇವರು ಇಚಲಕರಂಜಿ ಯಿಂದ ಜಮಖಂಡಿಗೆ ಬಂದಿದ್ದು ಅವರನ್ನು ಕರೆಯಲು ಹೋಗಿದ್ದನು . ಅಷ್ಟರಲ್ಲಿ 04-45 ಗಂಟೆಗೆ ಚಾಸಾ-6 ರವರು ಪೊನ ಕರೆ ಮಾಡಿ ಪೋನದಲ್ಲಿ ಉಮರಪಾರುಕ ಇತನಿಗೆ ಲಕನಕೆರೆ ಹತ್ತಿರ ಅಪಘಾತವಾಗಿರುತ್ತದೆ ಎಂದು ವಿಷಯ ಗೊತ್ತಾಗಿ ನಾನು ಮತ್ತು ಚಾಸಾ- 9 ಹಾಗೂ ಸಂಬಂದಿಕರು ಅಪಘಾತವಾದ ಸ್ಥಳಕ್ಕೆ ಹೋಗಿ ನೋಡಲಾಗಿ ಸ್ಥಳಕ್ಕೆ ಹೋದಾಗ ಕಾರ ಮತ್ತು ಬೈ ಮಧ್ಯ ಅಪಘಾತವಾಗಿದ್ದು ಅಪಘಾತದಲ್ಲಿ ಪಾರುಕ ಇತನಿಗೆ ತಲೆಗೆ ಬಾರಿ ಪೆಟ್ಟಾಗಿದ್ದು ನಂತರ ಆಸ್ಪತ್ರೆಗೆ ತೆಗೆದುಕೊಂಡು ಹೋಗುವ ಪೂರ್ವದಲ್ಲಿ ಆತನು ದಾರಿ ಮಧ್ಯ ಮರಣ ಹೊಂದಿರುತ್ತಾನೆ . ಅಪಘಾತ ಪಡಿಸಿದ ಕಾರಿನ ಸಂಖ್ಯೆ ನೋಂದಣಿ ಸಂಖ್ಯೆ 48-ಎಂ-9463 ಇದ್ದು ಹಾಗೂ ಆ ದಿನ ಕಾರಿನ ಚಾಲಕ ಸಂತೋಷ ಮಾಲಿಂಗಪ್ಪಾ ಕರ್ಲಟ್ಟಿ ಎಂಬುವವದು ಹೇಳಿದನು ಸದರಿ ವಿಷಯವನ್ನು ಚಾಸಾ-6 ರವರು ತಿಳಿಸಿರುತ್ತಾರೆ . ಅಪಘಾತ ಹೇಗೆ ಆಯಿತು ಎಂಬ ವಿಷಯ ನನಗೆ ಗೊತ್ತಾಗಿರುವದಿಲ್ಲ . ಈ ಘಟನೆ ಕುರಿತು ನಾನು ಪಿರ್ಯಾದಿ ಕೊಟ್ಟಿರುತ್ತೇನೆ . ಪಿರ್ಯಾದಿಯನ್ನು ಚಾಸಾ-12 ರವರು ನಾನು ಕೊಟ್ಟ ಮಾಹಿತಿ ಪ್ರಕಾರ ಬರೆದಿರುತ್ತಾರೆ .

ಸದರಿ ಪಿರ್ಯಾದಿಯನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು . ನಿಪಿ-1 ನ್ನು ನೀಡಿದ ನಂತರ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವದಿಲ್ಲ . ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಲಾಗಿ ಪೋಟೋಗಳಲ್ಲಿ ಕಾಣಿಸುತ್ತಿರುವ ಅಪಘಾತ ಒಳಪಟ್ಟ ಮತ್ತು ಅಪಘಾತ ಪಡಿಸಿದ ಕಾರು ಮತ್ತು ದ್ವಿಚಕ್ರ ವಾಹವನ್ನು ನೋಡಿ ಗುರುತಿಸಿದ್ದು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು .

***ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು. ಮಾನ್ಯ ಸಸಅ ರವರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.***

**ಪಾಟೀ ಸವಾಲುಃ ಮಾನ್ಯ ಎಪಿಪಿ ವರಿಂದ-**

ನಿಪಿ-1 ರಲ್ಲಿ ಆರೋಪಿತನು ಕಾರವನ್ನು ವೇಗವಾಗಿ ಮತ್ತು ನಿಸ್ಕಾಜಿತನದಿಂದ ಚಲಾಯಿಸಿಕೊಂಡು ತಪ್ಪು ಮಾರ್ಗದ ಮೂಲಕ ಬಂದು ಅಪಘಾತ ಪಡಿಸಿರುತ್ತಾರೆಂದು ಚಾಸಾ-6 ರವರು ಹೇಳಿದ ವಿಷಯವನ್ನು ಬರೆಸಿರುತ್ತೇನೆ ಎಂದರೆ ಸರಿ . ಅಷ್ಟೆ ಅಲ್ಲದೇ ಚಾಸಾ-7 ರವರು ಕೂಡ ಅಪಘಾತವನ್ನು ನೋಡಿರುತ್ತಾರೆ ಎಂದು ನಿಪಿ-4 ರಂತೆ ಪೋಲಿಸರಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲುಃ ಶ್ರೀ ಯು ಎಚ್ ಕೆ ಆರೋಪಿ ಪರ ವಕೀಲರಿಂದಃ-**

ಚಾಸಾ-6 ರಾಜಕೀಯ ಒಡನಾಟದಲ್ಲಿ ಇರುತ್ತಾರೆ ಎಂದರೆ ಸರಿ . ಚಾಸಾ-6 ರವರು ನಮ್ಮ ಓಣಿಯಲ್ಲಿರುವನು ಕಾರಣ ನ್ಯಾಯಾಲಯಕ್ಕೆ ಬಂದು ಹೊಗಿ ಮಾಡುತ್ತಾನೆ ಎಂದರೆ ಸರಿ . ನಮ್ಮ ಓಣಿಯಲ್ಲಿ ಯಾವುದಾರೂ ನ್ಯಾಯಾಲಯದ ಕೆಲಸ ಇದ್ದರೆ ಆತತನ್ನು ಸಂಪರ್ಕಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ .

ನಾನು ಪೋಲಿಸ ಠಾಣೆಗೆ ಹೋಗಿ ಪಿರ್ಯಾದಿ ಕೊಟ್ಟಿರುತ್ತೇನೆ ಪಿರ್ಯಾದಿಯನ್ನು ಚಾಸಾ- 12 ರವರು ಬರೆದಿರುತ್ತಾರೆ ನನಗೆ ಓದಲು ಬರೆಯಲು ಬರುತ್ತದೆ ನಾನು ಗಾಬರಿಯಲ್ಲಿ ಇದ್ದ ಕಾರಣ ನಾನು ಸ್ವತಃ ಪಿರ್ಯಾದಿಯನ್ನು ಬರೆದಿರುವದಿಲ್ಲ ಅದಕಾರಣ ಪಿರ್ಯಾದಿಯನ್ನು ಚಾಸಾ-12 ರವರು ಬರೆದಿರುತ್ತಾರೆ . ಅಪಘಾತ ಹೇಗೆ ಆದ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇಲ್ಲ . ಅದಕಾರಣ ಪಿರ್ಯಾದಿಯನ್ನು ನನಗೆ ಬರೆಯಬೇಕೆಂದು ಮಾಹಿತಿ ಇಲ್ಲದೇ ಇದ್ದ ಕಾರಣ ಚಾಸಾ-6 ರವರು ಹೇಳಿದ ರೀತಿಯಲ್ಲಿ ಚಾಸಾ-12 ರವರು ಪಿರ್ಯಾದಿ ಬರೆದಿರುತ್ತಾರೆ .

ನನ್ನ ಗಂಡನಿಗೆ ಚಲನಾ ಪತ್ರ ಇರುವದಿಲ್ಲ , ನಾನು ನನ್ನ ಗಂಡನಿಗೆ ಹೆಲಮೆಟ್‌ನ್ನು

ಕೊಟ್ಟು ಕಳುಹಿಸಿದ್ದೆ . ಹೇಲಮೆಟ್ ಮನೆಯಿಂದ ಹಾಕಿಕೊಂಡು ಹೋಗಿರುತ್ತಾನೆ . ನಾನು ಪೋಲಿಸ ಠಾಣೆಗೆ ಒಂದೇ ಸಾರಿ ಬೇಟಿ ಕೊಟ್ಟಿರುತ್ತೇನೆ . ನಾನು ಎಷ್ಟು ಸಲ ಸಹಿ ಮಾಡಿದ ಬಗ್ಗೆ ನನಗೆ ನಕರವಾಗಿ ಹೇಳಲು ಬರುವದಿಲ್ಲ . ಚಾಸಾ-6 ರವರು ಅರೋಪಿಯ ಹೆಸರನ್ನು ತಿಳಿಸಿರುತ್ತಾರೆ . ಆರೋಪಿಯನ್ನು ನಾನು ಇದೆ ಮೊದಲನೇ ಸಲ ನೋಡುತ್ತಿದ್ದೇನೆಂದರೆ ಸರಿ . ನನ್ನ ಗಂಡನಿಗೆ ದ್ವಿಚಕ್ರ ವಾಹನ ಚಲಾಯಿಸಲು ಬರುತ್ತಿರಲಿಲ್ಲ ಆತನ ಬಳಿ ಚಲನಾ ಪ್ರಮಾಣ ಪತ್ರ ಇರಲಿಲ್ಲ ಆತನೆ ಹೊಗಿ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡು ಪರಿಹಾರ ಹಣ ಬರಲಿ ಎಂದು ಸುಳ್ಳು ಪಿರ್ಯಾದಿ ಸಲ್ಲಿಸಿ ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಿಪಿ-2 ಮತ್ತು 3 ರಲ್ಲಿ ಕಾಣುತ್ತಿರುವ ಕಾರು ವಾಹನಕ್ಕೆ ಯಾವುದೇ ರೀತಿಯ ಜಖಂ ಆಗಿರುವದಿಲ್ಲ , ಅದಕಾರಣ ಕಾರ ವಾಹನದಿಂದ ಯಾವುದೇ ಅಪಘಾತ ಆಗಿರುವದಿಲ್ಲ ಎಂದರೆ ಸರಿಯಲ್ಲ . ಪರಿಹಾರ ಹಣ ಬರಲಿ ಎಂದು ಖೊಟ್ಟಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ